**ಪಿ. ಡಬ್ಲ್ಯೂ: 1**

**( ಇಂದು ದಿಃ 29/01/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಟಿ ಎನ್ ವಕೀಲರಿಂದ,**

ನಾನು ಪಿರ್ಯಾದಿ ಸಂಸ್ಥೆಯಲ್ಲಿ 26 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ನಮ್ಮ ಸಂಸ್ಥೆ ಕಾನೂನಿನಡಿಯಲ್ಲಿ ನೊಂದಣಿ ಆದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಆದರೆ ಹಾಜರುಪಡಿಸಬಹುದು. ನನಗೆ ನ್ಯಾಯಾಲಯಕ್ಕೆ ಹಾಜರಾಗಲು ನಿರ್ದೇಶಕರ ಮಂಡಳಿಯಲ್ಲಿ ಠರಾವು ಆಗಿದೆ ಸದರಿ ಠರಾವಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಆರೋಪಿಗೆ ಸಾಲವನ್ನು ಮಂಕಿ ಶಾಖೆಯಲ್ಲಿ ನೀಡಲಾಗಿದೆ. ಮಂಕಿ ಶಾಖೆಯು ಹೊನ್ನಾವರದ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ಆರೋಪಿತನು ಹೊನ್ನಾವರದವರು ಆಗಿರುತ್ತಾರೆ ಅವರೂ ಸಹ ಭಟ್ಕಳ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದರೆ ಸರಿ. ಆರೋಪಿಗ ಸಾಲ ನೀಡುವಾಗ ನಾನು ಮಂಕಿ ಶಾಲೆಯಲ್ಲಿ ವ್ಯವಸ್ಥಾಪಕ ಆಗಿರಲಿಲ್ಲ, ಆರೋಪಿ ಸಾಲ ತುಂಬಿದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸಾಲವನ್ನು ಮಂಜೂರಿ ಮಾಡುವ ಕಾಲಕ್ಕೆ ಅವರ ಆದಾಯದ ಮೂಲವನ್ನು ತಿಳಿದುಕೊಂಡಿರುತ್ತೇವೆ. ಆದಾಯ ತೆರಿಗೆ ದಾಖಲೆಗಳನ್ನು ಪಡೆದಿರುತ್ತೇವೆ. ಆರೋೀಪಿಯು ಇದೇ ಮೊದಲ ಬಾರಿ ಸಾಲ ಪಡೆದಿರುತ್ತಾರೆ. ಸದರಿ ಸಾಲಕ್ಕೆ 2 ಜಾಮೀನುದಾರರು ಇದ್ದಾರೆ. ಸಾಲ ಕಟ್ಟು ಬಾಕಿ ಆದಾಗ ಜಾಮೀನುದಾರರಿಗೆ ನೊಟೀಸನ್ನು ನೀಡಿರುತ್ತೇವೆ. ನಿಪಿ-1 ಚೆಕ್ಕನ್ನು ಆರೋಪಿಯು ಸಾಲದ ಮೊತ್ತದ ಮರುಪಾವತಿಗಾಗಿ ನೀಡಿರುತ್ತಾರೆ. ನಿಪಿ -1 ಚೆಕ್ಕಿನ ಮೇಲೆ ಇರುವ ಬರವಣಿಗೆಯಲ್ಲಿ ವ್ಯತ್ಯಾಸ ಕಂಡುಬರುತ್ತಿದೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕಿನ ಮೇಲೆ ಇರುವ ಸಹಿಯಲ್ಲಿ ವ್ಯತ್ಯಾಸ ಇದೆ ಎಂದ ಅಮಾನ್ಯಗೊಂಡಿದೆ. ಚೆಕ್ಕನ್ನು ನನ್ನ ಸಮಕ್ಷಮ ನೀಡಿರುವುದಿಲ್ಲ. ಚೆಕ್ಕನ್ನು ಅದೇ ದಿನ ನೀಡಿದ ಬಗ್ಗೆ ದಾಖಲಾತಿಗಳು ನಮ್ಮ ಹತ್ತಿರ ಇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಆದರೆ ಹಾಜರುಪಡಿಸಬಹುದು. ಆರೋಪಿಯ ಮಂಕಿ ಶಾಖೆಯಲ್ಲಿ ಬೇರೆಯವರಿಗೆ ಜಾಮೀನುದಾರರು ಅಗಿದ್ದಾರೆ ಎಂದರೆ ದಾಖಲೆ ನೋಡಿ ಹೇಳಬಹುದು ಎಂದು ಉತ್ತರಿಸಿರುತ್ತಾರೆ. ಆರೋಪಿಯಿಂದ ರೂ.12 ,000 ಶೇರಿನ ಮೊತ್ತ ಹಾಗೂ ಎಫ್ ಡಿ ಯನ್ನು ನಮ್ಮ ಬಳಿ ಇಟ್ಟುಕೊಳ್ಳಲಾಗಿದೆ. ಆರೋಪಿಯ ಸುಮಾರು ಕಂತುಗಳನ್ನು ತುಂಬಿದಾ್ದ ಎಂದರೆ ಸರಿಯಲ್ಲ . ಅರೋಪಿಯು ನಮ್ಮ ಸಂಸ್ಥೆಯಿಂದ ಪಡೆದ ಸಾಲ ಸಂಪೂರ್ಣವಾಗಿ ಚುಕ್ತಾ ಮಾಡಿದ್ದಾರೆ ಎಂರದೆ ಸರಿಯಲ್ಲ. ನಿಪಿ-1 ಚಕೆಕ್ಕನ್ನು ಸ್ನೇಹಿತನ ಸಾಲಕ್ಕೆ ಭದ್ರತೆಗಾಗಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

ನಿಪಿ–1 ಚೆಕ್ಕಿನ ಮೇಲೆ ಇರುವ ಸಹಿ ಹಾಗೂ ಬರವಣಿಗೆ ಆರೋಪಿಯದು ಅಲ್ಲ ಎಂದರೆ ಸರಿಯಲ್ಲ. ಅರೋಪಿಯು ಸಂಪೂರ್ಣ ಸಾಲ ಚುಕ್ತಾ ಮಾಡಿದ್ದರು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ . ಆರೋಪಿ ಹಾಗೂ ಸದರಿ ಪ್ರಕರಣದ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸರಿಯಲ್ಲ. ನಿರ್ದೇಶಕರ ಮಂಡಳಿಯವರು ನನಗೆ ಸದರಿ ಪ್ರಕರಣದಾಖಲಿಸಲು ಅಧಿಕಾರ ನೀಡಿಲ್ಲ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿದ ಎಲ್ಲಾ ದಾಖಲೆಗಳು ಸದರಿ ಪ್ರಕರಣಕ್ಕೆ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ವಕೀಲರ ನೊಟೀಸು ಆರೋಪಿಗೆ ತಲುಪಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**